# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 07.06.2022 ಮಂಗಳವಾರ ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102.ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಶ್ರೀನಿವಾಸ್ ರೆಡ್ಡಿ | ಸದ್ಯಸರು | 9845284088 |
| 4 | ಶ್ರೀ ಸುರೇಶ್ ರೆಡ್ಡಿ | ಸದ್ಯಸರು | 9900388075 |
| 5 | ಶ್ರೀ ಚಂದ್ರ ರೆಡ್ಡಿ | ಸದ್ಯಸರು | 9900115285 |
| 6 | ಶ್ರೀ ಕೆ ಗೋಪಿನಾಥ್ | ಸದ್ಯಸರು | 9243111520 |
| 7 | ಶ್ರೀ ಕೇಶವ್ ರೆಡ್ಡಿ | ಸದ್ಯಸರು | 994526571 |
| 8 | ಶ್ರೀ ಟಿ.ಎ ಮೌಲಸಾಬ್ | ಸಾರ್ವಜನಿಕರು | 990034140 |
| 9 | ಶ್ರೀಮತಿ ಲಲಿತಾಂಬ | ಸಾರ್ವಜನಿಕರು | 9448063776 |
| 10 | ಶ್ರೀ ಮುರಳಿ ನಾರಾಯಣ್ | ಸಾರ್ವಜನಿಕರು | 9739957661 |
| 11 | ಶ್ರೀ ದೇಬಿ ಪ್ರಸಾದ್ | ಸಾರ್ವಜನಿಕರು | 9731405007 |
| 12 | ಶ್ರೀ ಶ್ರೀನಾಥ್ ಶೆಣೈ | ಸಾರ್ವಜನಿಕರು | 9008944777 |
| 13 | ಶ್ರೀ ಶ್ಯಾಂಮ್ ಸಿಂಗ್ | ಸಾರ್ವಜನಿಕರು | 9901241188 |
| 14 | ಶ್ರೀ ಮಧುಸುಧನ್ | ಸಾರ್ವಜನಿಕರು | 797570810 |
| 15 | ಶ್ರೀ ಪ್ರಸಾತ್ ಶಿವನೇಷನ್ | ಸಾರ್ವಜನಿಕರು | 9448063776 |
| 16 | ಶ್ರೀ ವಿನೋದ್ ಕೃಷ್ಣ | ಸಾರ್ವಜನಿಕರು | 9945503212 |
| 17 | ಶ್ರೀ ಸಂದೀಪ ಸಿಂಗ್ | ಸಾರ್ವಜನಿಕರು | 9902645210 |
| 18 | ಶ್ರೀ ಸಚಿನ್ ಪಂಡಿತ | ಸಾರ್ವಜನಿಕರು | 988624027 |
| 19 | ಶ್ರೀ ವಿಕಾಸ್ ಡಿ. ಎಸ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 20 | ಶ್ರೀ ರಮೇಶ್ ಡಿ | ಸಹಾಯಕ ಅಭಿಯಂತರರು. | 9480688559 |
| 21 | ಶ್ರೀ ಹೊನ್ನೂರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 9480688490 |
| 22 | ಶ್ರೀಮತಿ ಭವಾನಿ ಎಂ.ಎಂ | ಪಶುಸಂಗೋಪನೆ, ಇನ್ಸ್ಪೆಕ್ಟರ್ | 9448504577 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಸಾರ್ವಜನಿಕರಿಗೆ ಹಾಗೂ ವಿವಿಧ ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು. ಸಭೆಗೆ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿ ವರ್ಗದವರು ಗೈರು ಹಾಜರಾಗಿರುವುದರಿಂದ ನೋಡಲ್ ಅಧಿಕಾರಿಗಳು ಕಾರಣ ಕೇಳಿ ನೋಟಿಸ್ ಜಾರಿ ಮಾಡುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

(2....)

Scanned with

1. ಶ್ರೀಮತಿ ನೇತ್ರಾವತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ)
2.ವ್ಯವಸ್ಥಾಪಕರು, ಕೆ.ಸಿ.ಡಿ.ಸಿ ಸೋಮಸುಂದರಪಾಳ್ಯ
3.ವೈದ್ಯಾಧಿಕಾರಿಗಳು, ಬಂಡೇಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ.
4.ಶ್ರೀ ರಾಮಚಂದ್ರ, ಸಹಾಯಕ ಕಂದಾಯ ಅಧಿಕಾರಿಗಳು, ಹೆಚ್.ಎಸ್.ಆರ್ ಉಪವಿಭಾಗ
5.ಶ್ರೀ ಮಹೇಶ್, ಅರಣ್ಯ ವಲಯ ಅಧಿಕಾರಿಗಳ
6.ಪೋಲಿಸ್ ಇನ್ಸ್‌ಪೆಕ್ಟರ್, ಬಂಡೇಪಾಳ್ಯ ಪೋಲಿಸ್ ಠಾಣೆ
7.ಪೋಲಿಸ್ ಇನ್ಸ್‌ಪೆಕ್ಟರ್, ಸಂಚಾರಿ ಪೋಲಿಸ್ ಠಾಣೆ, ಎಲೆಕ್ಟ್ರಾನಿಕ್ ಸಿಟಿ

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**

1. ಹಿಂದಿನ ಸಭೆಯಲ್ಲಿ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ರವರುಗಳು 12 ದಿನಕ್ಕೊಮ್ಮೆ ಕುಡಿಯುವ ನೀರು ಬಿಡುತ್ತಿರುವ ಬಗ್ಗೆ ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಶ್ರೀ ವಿಕಾಸ್ ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು 7 ರಿಂದ 8 ದಿನಕ್ಕೊಮ್ಮೆ ನೀರು ಬಿಡುತ್ತಿದ್ದು, ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಒಂದು ವಾರಕ್ಕೆ 2-3 ದಿನಗಳಿಗೆ ನೀರು ಬಿಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಈ ಬಗ್ಗೆ ಶ್ರೀ ಮೌಲ ರವರು ಮುನೇಶ್ವರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ 15 ದಿನವಾದರು ಕುಡಿಯುವ ನೀರನ್ನು ಬಿಟ್ಟಿರುವುದಿಲ್ಲವೆಂದು ಸಭೆಯಲ್ಲಿ ಚರ್ಚಿಸಿದರು. ಈ ಬಗ್ಗೆ ಶ್ರೀಮತಿ ಲಲಿತಾಂಬ ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಂಪರ್ಕವನ್ನು ಪ್ರದೇಶವಾರು ವೇಳಾಪಟ್ಟಿ ಸಾರ್ವಜನಿಕರಿಗೆ, ಸ್ಥಳೀಯರಿಗೆ ಒದಗಿಸುವಂತೆ ಸಭೆಯಲ್ಲಿ ಕೋರಿದ್ದರು. ಶ್ರೀ ವಿಕಾಸ್ ಸ.ಅ. ರವರು ಈಗಾಗಲೇ ಪ್ರದೇಶವಾರು ವೇಳಾಪಟ್ಟಿ ಪ್ರಕಾರ ಕುಡಿಯುವ ನೀರಿನ ಪಂಪ್ ಲೋಪದೋಷದಿಂದ ಬಿಡಲು ವಿಳಂಬವಾಗುತ್ತಿರುವ ಬಗ್ಗೆ ಒಂದು ದಿನ ಮುಂಚಿತವಾಗಿ ಪತ್ರಿಕೆಯಲ್ಲಿ ಪ್ರಕಟ ಮಾಡಲಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.
2. ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಬೊಮ್ಮನಹಳ್ಳಿ, ಹೆಚ್.ಎಸ್.ಆರ್ ಬಡಾವಣೆ ಮತ್ತು ಮಂಗಮ್ಮನಪಾಳ್ಯ ವ್ಯಾಪ್ತಿಯಲ್ಲಿ ಒಂದು ಡಿ-ಸಿಲ್ಟ್ (Jeeting Machine) ಲಭ್ಯವಿದ್ದು, ಮಂಗಮ್ಮನಪಾಳ್ಯ ವ್ಯಾಪ್ತಿಯಲ್ಲಿ ವಾರಕ್ಕೆ 3 ದಿನ ಹೂಳೆತ್ತಲು ಕ್ರಮ ವಹಿಸಲಾಗುತ್ತಿದ್ದು. ದಿನಕ್ಕೆ 10 ಮ್ಯಾನ್‌ಹೋಲ್‌ಗಳಲ್ಲಿ ಡಿ-ಸಿಲ್ಟ್ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಶ್ರೀ ಶ್ರೀನಿವಾಸ್ ರೆಡ್ಡಿ ರವರು ಮಾತಾನಾಡುತ್ತಾ, ಹೆಚ್.ಎಸ್.ಆರ್ ಬಡಾವಣೆ ಮತ್ತು ಮಂಗಮ್ಮನಪಾಳ್ಯ ಪ್ರದೇಶಕ್ಕೆ ಪ್ರತ್ಯೇಕವಾಗಿ (Jeeting Machine) ವ್ಯವಸ್ಥೆ ಕಲ್ಪಿಸಲು ಶ್ರೀ ವಿಕಾಶ್, ಸ.ಅ ರವರಿಗೆ ತಿಳಿಸಿದರು, ಈ ಬಗ್ಗೆ ಈಗಾಗಲೇ ಮೇಲಾಧಿಕಾರಿಗಳಿಗೆ ಕಡತವನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.
3. ವಾರ್ಡ್ ವ್ಯಾಪ್ತಿಯ ಸೋಮಸುಂದರಪಾಳ್ಯ, ಮುನೇಶ್ವರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಳಚರಂಡಿ ಪೈಪ್‌ಲೈನ್ ಮಾರ್ಗ ಕಾಮಗಾರಿ ಮಂದಗತಿಯಿಂದ ಸಾಗುತ್ತಿರುವ ಬಗ್ಗೆ ಹಾಗೂ ಶೀಘ್ರದಲ್ಲಿ ಪೂರ್ಣಗೊಳಿಸಲು ಶ್ರೀ ಮೌಲಾ, ಶ್ರೀ ಶ್ರೀನಿವಾಸ್ ರೆಡ್ಡಿ ರವರು ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಶ್ರೀ ವಿಕಾಸ ಸ.ಅ. ರವರು ಒಂದು ವಾರದೊಳಗಾಗಿ ಪೂರ್ಣಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **ಘನತ್ಯಾಜ್ಯ ನಿರ್ವಹಣೆ ಮತ್ತು ಕೆ.ಸಿ.ಡಿ.ಸಿ ಘಟಕ**

1. ವಾರ್ಡ್ ವ್ಯಾಪ್ತಿಯ ಹರಳುಕುಂಟೆ ಸೋಮಸುಂದರಪಾಳ್ಯದಲ್ಲಿ ಸ್ಥಾಪಿಸಿರುವ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ (ಕೆ.ಸಿ.ಡಿ.ಸಿ ಘಟಕದಿಂದ ದುರವಾಸನೆ ಬರುತ್ತಿದ್ದು, ಈ ವಾಯು ಮಾಲಿನ್ಯದಿಂದ ಉಸಿರಾಡಲು ಹಾಗೂ ಆಹಾರವನ್ನು ಸೇವಿಸಲು ಮಕ್ಕಳಿಗೆ, ಮಹಿಳೆಯರಿಗೆ, ವೃದ್ಧರಿಗೆ ಹಾಗೂ ಸುತ್ತಮುತ್ತಲಿನ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ, ಆಸ್ಪತ್ರೆ ರೋಗಿಗಳಿಗೆ ಭಯಾನಕ ದುರ್ವಾಸನೆಯಿಂದ ರೋಗ ಹೆಚ್ಚಾಗುತ್ತಿದ್ದು, ಈ ಘಟಕದಿಂದ ಸರಿಯಾದ ಮುನ್ನೆಚರಿಕೆ ಕ್ರಮಗಳನ್ನಾಗಲೀ ನಿರ್ವಹಿಸುತ್ತಿರುವುದಿಲ್ಲ ಹಾಗೂ ಈ ಕುರಿತು ಈಗಾಗಲೇ ಸುಮಾರು ಸಾರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಗೆ ದೂರನ್ನು ಬರೆಯಲಾಗಿರುವ ಬಗ್ಗೆ ಹಾಗೂ (ಕ.ರಾ.ಮಾ.ನಿ.ಮ) ರವರು ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಸೂಚಿಸಿರುವುದಾಗಿ ಕಲ್ಯಾಣ ಸಂಘದವರು, ಸಾರ್ವಜನಿಕರು ಮತ್ತು ಸ್ಥಳೀಯರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು.

(3...)

Scanned with

ಈ ಬಗ್ಗೆ ಕೆ.ಸಿ.ಡಿ.ಸಿ. ವ್ಯವಸ್ಥಾಪಕರು ಹಾಗೂ ಶ್ರೀಮತಿ ನೇತ್ರಾವತಿ ಸ.ಕಾ.ಅ. (ಘನತ್ಯಾಜ್ಯ ನಿರ್ವಹಣೆ) ರವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಸಾರ್ವಜನಿಕರು ಹಾಗೂ ಸ್ಥಳೀಯ ಆರ್.ಡಬ್ಲ್ಯೂ.ಎ. ರವರು ತೀವ್ರ ಆಕ್ಷೇಪಿಸಿರುತ್ತಾ ಅಧ್ಯಕ್ಷರು/ನೋಡಲ್ ಅಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ರವರು ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು / ನೋಡಲ್ ಅಧಿಕಾರಿ ರವರು ಬೆಸ್ಕಾಂ ಇಲಾಖೆಗೆ ಪತ್ರ ಬರೆಯಲಾಗುವುದೆಂದ ಸಭೆಗೆ ತಿಳಿಸಿದರು.

- **ಬೀದಿ ದೀಪ (ವಿದ್ಯುತ್) :-**

1. ಬೊಮ್ಮನಹಳ್ಳ ವಲಯ ಎಲ್ಲಾ ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಬೀದಿ ದೀಪ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ವಾರ್ಡ್ 190, ಮಂಗಮ್ಮನಪಾಳ್ಯ ವ್ಯಾಪ್ತಿಯಲ್ಲಿ ಎಲ್ಲಿ ಅವಶ್ಯಕವಾಗಿರುವ ಹಾಗೂ ಬೀದಿ ದೀಪ ಚಾಲ್ತಿಯಲ್ಲಿ ಇಲ್ಲದೇ ಇರುವ ಸ್ಥಳವನ್ನು ಗುರುತಿಸಿ ನೀಡಿದಲ್ಲಿ ಬೀದಿ ದೀಪಗಳನ್ನು ಅವಳಡಿಸಲು ಶ್ರೀ ರಮೇಶ್ ಸ.ಅ. ವಿದ್ಯುತ್ ರವರು ವಾರ್ಡ್ ಸಭೆಯ ಗಮನಕ್ಕೆ ತಂದರು. ಶೀ ಮೌಲ್ & ಶ್ರೀನಿವಾಸ್ ರೆಡ್ಡಿ ರವರು ಮಾತಾನಾಡುತ್ತ ಬೀದಿ ದೀಪಗಳನ್ನು ಅಳವಡಿಸಿದ ಮೇಲೆ ಟೈಮರ್‌ಗಳನ್ನು ಅವಳಡಿಸಲು ತಿಳಿಸಿದರು. ಈ ಬಗ್ಗೆ ಶ್ರೀ ರಮೇಶ್ ಸ.ಅ. ರವರು 15 ದಿನಗಳಲ್ಲಿ ಟೈಮರ್‌ಗಳನ್ನು ಅಳವಡಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು ಮತ್ತು ಬಾಬು ರೆಡ್ಡಿ (ಕೇಶವ ರೆಡ್ಡಿ) ರವರು ವಾಹನ ದಟ್ಟಣೆಯ ಪ್ರದೇಶದಲ್ಲಿ ಮತ್ತು ಪೋಲಿಸ್ ಬಿಟ್ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸಲು ತಿಳಿಸಿದರು ಹಾಗೂ ಹೊಸಪಾಳ್ಯದಲ್ಲಿ ಬೆಸ್ಕಾಂ ಇಲಾಖೆಯಿಂದ ಹೊಸ ಕಂಬಗಳನ್ನು ಸ್ಥಾಪಿಸಲಾಗಿದ್ದು, ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಕೋರಿದರು.

- **ಬೆಸ್ಕಾಂ :-**

1. ಹೊಸಪಾಳ್ಯ ಮಾರ್ಗದ ಜಾಗವನ್ನು ಬಿಟ್ಟುಕೊಡಲು Relinquishment Deed ಗಾಗಿ ಮನವಿ ಪತ್ರವನ್ನು ಜಾಗದ ಮಾಲೀಕರು ನೀಡಿದ್ದು, Relinquishment Deed ಈಗಾಗಲೇ ಸ.ಕಂ.ಅ. (ಹೆಚ್.ಎಸ್.ಆರ್) ರವರ ಕಛೇರಿಯಲ್ಲಿ ಕಡತವು ಪ್ರಗತಿಯಲ್ಲಿದ್ದು, ಕಾಮಗಾರಿ ಇಲಾಖೆಯಿಂದ ರಸ್ತೆಯನ್ನು ಅಗಲೀಕರಣ ಮಾಡಲು, ಬೆಸ್ಕಾಂ ಇಲಾಖೆಯಿಂದ ಅಳವಡಿಸಿರುವ ಕಂಬಗಳನ್ನು ತೆರವುಗೊಳಿಸಿ ಸ್ಥಳಾಂತರ ಮಾಡಲು ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿಜಯಕುಮಾರ್, ಸ.ಅ. ರವರು ವಾರ್ಡ್ ಸದಸ್ಯರಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿ ಹಾಗೂ ಸಂಬಂಧಪಟ್ಟ ಇಲಾಖೆಯಿಂದ ಪತ್ರವನ್ನು ಸಲ್ಲಿಸಿದರೆ ಸ್ಥಳ ಪರಿಶೀಲಿಸಿ ಕಂಬಗಳನ್ನು ಸ್ಥಳಾಂತರ ಮಾಡಲು ಕ್ರಮ ವಹಿಸಲಾಗುವುದಾಗಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಬಂಡೇಪಾಳ್ಯದಲ್ಲಿ ಕಂಬಗಳು ಇತ್ತೀಚಿಗೆ ಸುರಿದ ಭಾರಿ ಬಿರುಗಾಳಿ, ಮಳೆಯಿಂದಾಗಿ ಅರ್ಧ ಭಾಗ ಮುರಿದಿದ್ದ ಕಂಬಗಳನ್ನು ತೆರವುಗೊಳಿಸಲು ಹಾಗೂ ಸೋಮಸುಂದರಪಾಳ್ಯ ಕೆರೆಯ ಬಳಿ ಅಳವಡಿಸಿರುವ ಕಂಬಗಳು ಮುರಿದ್ದು ಹೋಗಿರುವ ಬಗ್ಗೆ ಸದ್ಯದರು. ಸಾರ್ವಜನಿಕರು ಮತ್ತು ಸ್ಥಳೀಯರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಶ್ರೀ ವಿಜಯಕುಮಾರ್ ಸ.ಅ. ಬೆಸ್ಕಾಂ ರವರು ಸ್ಥಳ ಪರಿಶೀಲಿಸಿ ಕಂಬಗಳನ್ನು ತೆರವುಗೊಳಿಸಲು ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯ ಉಜ್ವಲ್ ಫ್ಯಾಕ್ಟರ್ ಹತ್ತಿರ, ಹೊಸಪಾಳ್ಯ ಮುಖ್ಯ ರಸ್ತೆಯು ಕಿರಿದಾಗಿದ್ದು, ರಸ್ತೆಯಲ್ಲಿ ವಾಹನ ದಟ್ಟಣೆಯಾಗುತಿದ್ದು, ರಸ್ತೆಯನ್ನು ಅಗಲೀಕರಣ ಮಾಡಲು ರಸ್ತೆಯ ಬದಿಗಳಲ್ಲ ಅಳವಡಿಸಿರುವ ಕಂಬಗಳನ್ನು ತೆರವುಗೊಳಿಸಿ ಸ್ಥಳಾಂತರ ಮಾಡಲು ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ರವರು ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಿರು.

- **ಬೃಹತ್ ಮಳೆ ನೀರುಗಾಲುವೆ :-**

1. ಮಂಗಮ್ಮನಪಾಳ್ಯ ವ್ಯಾಪ್ತಿಯ ರಾಜುಕಾಲುವೆಗಳಲ್ಲಿ ಹೂಳೆತ್ತಲು ಸಭೆಯಲ್ಲಿ ವಾರ್ಡ್ ಸದಸ್ಯರು ಪ್ರಸ್ತಾಪಿಸಿದರು. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ರವರು ಈಗಾಗಲೇ ಎಲ್ಲಾ ಚರಂಡಿಗಳಲ್ಲಿ ಹೂಳೆತ್ತಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

(4...)

Scanned with

- **ಕಾಮಗಾರಿ ಇಲಾಖೆ :-**

1. ಮಂಗಮ್ಮನಪಾಳ್ಯ ವ್ಯಾಪ್ತಿಯ ವಾರ್ಡ್ ಚರಂಡಿಗಳಲ್ಲಿ ಹೂಳೆತ್ತಲು ಶ್ರೀ ಕೇಶವ ರೆಡ್ಡಿ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಹಾಯಕ ಅಭಿಯಂತರಾದ ಶ್ರೀ ರಾಜಗೋಪಾಲ್‌ಬಾಬು ರವರು ಈಗಾಗಲೇ ಟ್ರ್ಯಾಕ್ಟರ್, ೫ ಜನ ಕೂಲಿ ಆಳುಗಳು ಚರಂಡಿಗಳಲ್ಲಿ ಹೂಳೆತ್ತಲು ನೇಮಿಸಲಾಗಿರುತ್ತದೆ. ೫ ಸಿಬ್ಬಂದಿ ಎಲ್ಲಾ ಚರಂಡಿಗಳಲ್ಲಿ ಹೂಳೆತ್ತಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ವಾರ್ಡ್‌ಗೆ 4 ಟ್ರ್ಯಾಕ್ಟರ್ 20 ಜನ ಕೂಲಿ ಆಳುಗಳನ್ನು ನಿಯೋಜಿಸಲು ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

- **ಪಶುಸಂಗೋಪನೆ :-**

1. ದೈನಂ ದಿನ ವಾರ್ಡ್ ಪ್ರದೇಶಗಳಲ್ಲಿ ಸ್ಥಳೀಯ ನಿವಾಸಿಗಳು ಮತ್ತು ಸಾರ್ವನಿಕರು ಶ್ವಾನಗಳೊಂದಿಗೆ ಬೆಳಗ್ಗೆ & ಸಂಜೆ ವೇಳಯಲ್ಲಿ ವಾಕಿಂಗ್ ಸಮಯದಲ್ಲಿ ಮುನ್ನೆಚರಿಕೆ ಕ್ರಮವಾಗಿ ಶ್ವಾನದ ಮಾಲೀಕರು, ಮುಖಗವಸ, ವಾಕಿಂಗ್ ಸ್ಟಿಕ್, ಬೆಲ್ಟ್, ಇತ್ಯಾದಿ ಇಲ್ಲದೆ ಬರುತ್ತಿದ್ದು, ಇದರಿಂದ ಮಕ್ಕಳಿಗೆ,ಸ್ಥಳೀಯರಿಗೆ ಕಚ್ಚುವ ಸಂಭವಿರುವುದರಿಂದ ಮಾಲೀಕರಿಗೆ ಎಚ್ಚರಿಕೆ ನೀಡಿ ಮುನ್ನೇಚರಿಕೆ ಕ್ರಮಗಳನ್ನು ಅಳವಡಿಸುವಂತೆ ಸಭೆಯಲ್ಲಿ ಸದಸ್ಯರು ಪ್ರಸ್ತಾಪಿಸಿದರು ಹಾಗೂ ಸಾಕು ನಾಯಿಗಳ ಸರ್ವೆ ಮಾಡಿ ಪರವಾನಗಿ ನೀಡಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalababu

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with